

## ಬನಗೆರೆಯ ಮೆಟ್ಟಿಲು

ಸಾಲು ಸಾಲಾಗಿ ಘಟ್ಟ, ದಟ್ಟ ಕಾಡು, ಹಸಿರು ಗುಡ್ಡಗಳ ನಡುವೆ ಪುಟ್ಟ ಹಳ್ಳಿ ಮನೆಗಳು. ಕವಿಯ ಕಲ್ಪನೆಗಳಂತಿರುವ ಇವು ಮಲೆನಾಡಿನ ಬನಗೆರೆ ಎಂಬ ಹಳ್ಳಿಯ ಒಂದು ಸುಂದರ ದೃಶ್ಯ. ದೊಡ್ಡ ಗುಡ್ಡದ ಭಾರೀ ತಗ್ಗಿನಲ್ಲಿರುವ ಈ ಊರಿನ ಒಂದು ವಿಶೇಷವೆಂದರೆ ಕೆಲವು ಮನೆಗಳಿಗೆ ರಸ್ತೆಯಿಂದ ಮನೆಯ ಅಂಗಳಕ್ಕೆ ವಾಹನವೂ ಹೋಗಲಾರದ ಪ್ರಕೃತಿ ಸಹಜ ಭೌಗೋಳಿಕ ವಿನ್ಯಾಸ. ಇನ್ನು ಇಲ್ಲೇ ಮನೆ, ತೋಟ ಮಾಡಿರುವ ಜನರು ತಗ್ಗಿನಲ್ಲಿರುವ ತಮ್ಮ ಮನೆಗಳಿಗೆ ತಲುಪಲು ತಾವೇ ಸಿದ್ಧಪಡಿಸಿಕೊಂಡ ಮೆಟ್ಟಿಲುಗಳನ್ನು ಬಳಸುವುದು ಅನಿವಾರ್ಯ. ಅವೂ ಒಂದೆರಡು ಮೆಟ್ಟಿಲುಗಳಲ್ಲ, ಕೆಲವು ಮನೆಗಳಿಗೆ ನೂರಕ್ಕೂ ಮಿಕ್ಕ ಮೆಟ್ಟಿಲುಗಳಿವೆ. ಮಕ್ಕಳು, ಹಿರಿಯರಾದಿಯಾಗಿ ಎಲ್ಲರಿಗೂ ಓಡಾಟಕ್ಕೆ ಈ ಮಾರ್ಗವೇ ಅನಿವಾರ್ಯ. ಅಲ್ಲೇ ಹುಟ್ಟಿ ಬೆಳೆದವರಿಗೆ ಇವೆಲ್ಲ ಅಭ್ಯಾಸವಾಗಿದೆ. ಅತಿಥಿಗಳು ಮಾತ್ರ ಮೆಟ್ಟಿಲುಗಳ ಸೌಂದರ್ಯ ಸವಿಯುತ್ತ, ಗಟ್ಟಿ ಹೆಜ್ಜೆಗಳನ್ನಿಡುತ್ತ ಸಾಗಬೇಕು.

—ಅರ್ಚನಾ ಬೊಮ್ನಳ್ಳಿ, ಶಿರಸಿ

## ಮನೆಗೊಂದು ಮರ

ಬೆಂಗಳೂರಿನಲ್ಲಿ ಬದುಕು ಸುಲಭವೇನಲ್ಲ. ಕೊರೊನಾ ಬರುವ ಮೊದಲಂತೂ ಯಾರಿಗಿತ್ತು ಸಮಯ ಹೇಳಿ? ಬೆಳಿಗ್ಗೆ 8ಕ್ಕೆ ಮನೆಬಿಟ್ಟರೆ ಪುನಃ ಮನೆಸೇರುವುದು ರಾತ್ರಿ 8ಕ್ಕೇ. ಹೆಚ್ಚಿನವರದು ಬಾಡಿಗೆ ಮನೆ. ಸ್ವಂತ ಮನೆಯಿದ್ದರೂ 30x 40 ಸೈಟಿನಲ್ಲಿ ಮಣ್ಣಿಗೆಲ್ಲಿ ಜಾಗ? ಅದರಲ್ಲೂ ಒಂದು ಮರ ಬೆಳೆಸುವುದು ಹೇಗೆ?

ಅದು 2009 ರ ಮಳೆಗಾಲದ ಸಮಯ. ಊರಿನಿಂದ ಬಂದ ನನ್ನ ಮಾವನವರಿಗೆ ಮನೆಯಲ್ಲಿ ಹೇಗೆ ಹೊತ್ತು ಕಳೆಯುವುದೆಂಬ ಸಮಸ್ಯೆ. ಒಂದು ಭಾನುವಾರದ ಸಂಜೆ ಊರಿನಿಂದ ತಂದಿದ್ದ ಹಲಸಿನ ಬೀಜವನ್ನು ಮೂಲೆಯಲ್ಲಿ ಹಾಕಿ ಎಂದು ಅತ್ತೆ ಅಂದಾಗ ಸರಿ ಎಂದು ಹಾಕಿದರು ಮಾವ. ಹಲಸಿನ ಬೀಜ ನೋಡನೋಡುತ್ತಿದ್ದಂತೆ 5—6 ವರ್ಷಗಳಲ್ಲೇ ಗಿಡ ಮರವಾಗಿತ್ತು. ಮೊದಲ ಹಲಸಿನ ಕಾಯಿ ನೋಡಿದ ಸಂಭ್ರಮ ಇನ್ನೂ ನೆನಪಿದೆ.

3—4 ಸೀಸನ್ ಹಲಸಿನ ಹಣ್ಣನ್ನು ತಿಂದ ಮೇಲೆ ನಮಗೆ ಬೇರೆ ಮನೆಗೆ ಹೋಗುವ ಅನಿವಾರ್ಯತೆ ಬಂದಿತ್ತು. ಅಂದು, ಮನೆ ಬಿಡುವುದಕ್ಕಿಂತ ಮರ ಬಿಟ್ಟುಹೋಗುವ ನೋವು ಜಾಸ್ತಿಯಿತ್ತೆಂದರೂ ತಪ್ಪಲ್ಲ. ಇತ್ತೀಚೆಗೆ ಏನೋ ಕೆಲಸಕ್ಕೆ ಹಳೆಯ ಮನೆಯ ಕಡೆ ಹೋಗಿದ್ದೆ. ಹಾಗೆ ಹಲಸಿನ ಮರ ನೋಡಿ ಕಣ್ತುಂಬಿ ಬಂದಿತ್ತು. ಹಲಸಿನ ಹಣ್ಣನ್ನು ತಿಂದ ಆ ಮನೆಯವರೂ ನಮಗೆ ಕೃತಜ್ಞತೆ ಹೇಳಲು ಮರೆಯಲಿಲ್ಲ. ವರ್ಷಪೂರ್ತಿ ಮನೆಗೆ ತಂಪುಕೊಡುವ ಮರ, ಬೇಸಿಗೆಯಲ್ಲಿ ಹೊಟ್ಟೆತುಂಬ ಹಣ್ಣನ್ನೂ ಕೊಡುವುದನ್ನು ಹಾಡಿ ಹೊಗಳಿದರು. ಹೊರಡುವಾಗ ಕೊಯ್ದಿಟ್ಟ ಹಣ್ಣನ್ನೂ ಕೊಟ್ಟರು. ಮರಕ್ಕೆ ಬೇಕಾಗುವುದು 4 ಅಡಿಯಷ್ಟು ಜಾಗ, ರಸ್ತೆಯ ಬದಿಯೇ ಹಾಕಿದರೆ ಸಾಕು.

—ರಾಮಕೃಷ್ಣ ಹೆಗಡೆ, ಆಡುಕಳ

